ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,

ಶಹಾಪೂರ

ಸಿ.ಡಬ್ಲ್ಯೂ 1 ಪಿ.ಡಬ್ಲ್ಯೂ1

ಸಿ.ಸಿ. ನಂ. 59//2021

ಪ್ರಮಾಣ ವಚನ ಭೋದಿಸಿದ ದಿನಾಂಕಃ 13-11-2024.

ಮುಂದುವರೆದ ಪಾಟಿ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ವಕೀಲರಿಂದಃ

**4.** ಪಂಚನಾಮೆ ಮಾಡುವ ಕಾಲಕ್ಕೆ ಸಾರ್ವಜನಿಕರು ಯಾರು ಇರಲಿಲ್ಲ. ಆ ದಿನ ಪಂಚನಾಮೆ ಮಾಡಿಕೊಂಡು ಪೊಲೀಸ್ ಠಾಣೆಗೆ ಬಂದಿದ್ದಾಗ ಸಮಯ ಸಾಯಂಕಾಲ 7.15 ಗಂಟೆ ಆಗಿತ್ತು. ಲಾರಿಯನ್ನು 4 ನೇ ಆರೋಪಿ ಅಂಬ್ರೇಶ್ ಚಲಾಯಿಸಿಕೊಂಡು ಠಾಣೆಗೆ ಬಂದಿದ್ದ. ಸದರಿ ಗೊಬ್ಬರ ಚೀಲಗಳನ್ನು ನಮ್ಮ ಸಮಕ್ಷಮದಲ್ಲಿ ಪೊಲಿಸ್ ಠಾಣೆಯಲ್ಲಿ ತೂಕ ಮಾಡಿರುತ್ತಾರೆ. ತೂಕ ಮಾಡುವ ಮಶೀನ್ ನಮ್ಮ ಕಚೇರಿಯಿಂದ ತೆಗೆದುಕೊಂಡು ಹೋಗಿದ್ದೇವು. ಸದರಿ ಗೊಬ್ಬರ ನಕಲಿ DAP ಗೊಬವ್ವರ ಆಗಿರುತ್ತದೆ ಎಂದಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಅಸಲಿ DAP ಗೊಬ್ಬರ ಆಗಿದ್ದರೇ ನೀರಲ್ಲಿ ಹಾಕಿದರೇ ತಕ್ಷದಲ್ಲಿ ಕರಗುವುದಿಲ್ಲ ಆದರೆ ಆ ದಿನ ಜಪ್ತಿಪಡಿಸಿಕೊಂಡ ಗೊಬ್ಬರ ನೀರಿನಲ್ಲಿ ಹಾಕಿದ ತಕ್ಷಣ ನೀರಿನಲ್ಲಿ ಕರಗಿ ಕೆಸರಿನಂತೆ ಆಗಿರುತ್ತದೆ ಎಂದು ಹೇಳುತ್ತಾರೆ. ಪೋಲಿಸ್ ಠಾಣೆಯಲ್ಲಿನಾವು ಜಪ್ತಿಪಡಿಸಿಕೊಂಡ ಗೊಬ್ಬರ ನೀರಿನಲ್ಲಿ ಹಾಕಿ ಪರೀಕ್ಷೆ ಮಾಡಿರುತ್ತೇವೆ. ಆ ದಿನ ಒಂದು ಲೋಟದಲ್ಲಿ ನೀರು ಹಾಕಿ ಅದರಲ್ಲಿ ಗೊಬ್ಬರ ಹಾಕಿ ಪರೀಕ್ಷಿಸಿರುತ್ತೇವೆ. ಸದರಿ ಲೋಟ ಠಾಣೆಯಲ್ಲಿ ಇತ್ತು. ದೂರಿನಲ್ಲಿ ಮತ್ತು ನನ್ನ ಮರು ಹೇಳಿಕೆಯಲ್ಲಿ ನಾವು ಜಪ್ತಿಪಡಿಸಿಕೊಂಡ ಗೊಬ್ಬರವನ್ನು ಪೊಲೀಸ್ ಠಾಣೆಯಲ್ಲಿ ಪರೀಕ್ಷಿಸಿರುತ್ತೇವೆ ಎಂದು ಹೇಳಿರುವುದಿಲ್ಲ. 3 ನೇ ಆರೋಪಿ ಸುಜಾತಾ ಇವರ ಮನೆಯಲ್ಲಿ ನಕಲಿ ಗೊಬ್ಬರ ತಯಾರಿಸಲಾಗಿದೆ ಎನ್ನುವ ಬಗ್ಗೆ ನಮಗೆ ಗೊತ್ತಾಗಿರುತ್ತದೆ. ಈ ವಿಷಯ ನನಗೆ ದೂರು ದಾಖಲಿಸಿದ ನಂತರ ಪೊಲಿಸರ ಮೂಲಕ ಗೊತ್ತಾಗಿರುತ್ತದೆ. ಆ ವಿಷಯ ಗೊತ್ತಾದ ನಂತರ ನಾನು 3 ನೇ ಆರೋಪಿ ಸುಜಾತಾ ಇವರ ಮನೆಗೆ ಹೋಗಿರುವುದಿಲ್ಲ.

**5.** ದಿಃ 16-08-2020 ರಂದು ನಾವು ಜಪ್ತಿಪಡಿಸಿಕೂಡಿದ್ದ ಮಾದರಿ ಗೊಬ್ಬರವನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇವೆ. ಅದನ್ನು ನಾನೇ ಕಳುಹಿಸಿರುತ್ತೇನೆ. ಸದರಿ ಪ್ರಯೋಗಾಲಯದಿಂದ ವರದಿ ಯಾವ ದಿನಾಂಕದಂದು ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವರದಿಯಲ್ಲಿ ಮಾದರಿ ಗೊಬ್ಬರ DAP ಗೊಬ್ಬರ ಆಗಿರುವುದಿಲ್ಲ ಎಂದು ವರದಿ ಬಂದಿರುತ್ತದೆ. ಸದರಿ ಮಾದರಿ ಗೊಬ್ಬರ ನಕಲಿ DAP ಗೊಬ್ಬರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರಸಗೊಬ್ಬರದ ಬಗ್ಗೆ ಪದವಿಯಲ್ಲಿ ಒಂದು ವಿಷಯವಾಗಿ ಓದಿರುತ್ತೇನೆ. ಸದರಿ ರಸಗೊಬ್ಬರದ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ರಸಗೊಬ್ಬರದ ತಜ್ಞ ಆಗಿರುವುದಿಲ್ಲ ಎಂದರೆ ಸರಿ.

**6.** ನಾನು ಹೇಳುವಂತೆ ಆರೋಪಿತರು ಯಾವುದೇ ಅಪರಾಧ ಮಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಯಾವುದೇ ರಸಗೊಬ್ಬರ ಅಕ್ರಮವಾಗಿ ಸಾಗಾಟ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಜಪ್ತಿಪಡಿಸಿಕೊಂಡಿದ್ದೇನೆ ಎಂದು ಹೇಳುವ ರಸಗೊಬ್ಬರ ನಕಲಿ ರಸಗೊಬ್ಬರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಪ್ರಭಾವದಿಂದಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ **3** ಮತ್ತು **4** ನೇ ಆರೋಪಿ ಪರ ವಕೀಲರಿಂದಃ

**7.** ನನಗೆ ಭಾತ್ಮಿಯು ನಕಲಿ ರಸಗೊಬ್ಬರವನ್ನು ಮೂಡಬೂಳ ದಿಂದ ಇಟಗಾ ಕಡೆಗೆ ಸಾಗಾಟ ಮಾಡಲಾಗುತ್ತಿದ್ದೆ ಎನ್ನುವ ಬಗ್ಗೆ ಮಾತ್ರ ಬಂದಿತ್ತು. ನನಗೆ ಭಾತ್ಮಿ ಬಂದಿರುವ ವಿಚಾರದ ಕುರಿತು ನನ್ನ ಮೇಲಾಧಿಕಾರಿ ಶ್ರೀ ಗೌತಮ್ ವಾಗ್ಮಾರೆ ಇವರಿಗೆ ಲಿಖಿತವಾಗಿ ತಿಸಿರುವುದಿಲ್ಲ. ಸದರಿ ಗೌತಮ್ ವಾಗ್ಮಾರೆ ಇವರು ನಮಗೆ ಭಾತ್ಮಿ ಬಂದ ಸ್ಥಳಕ್ಕೆ ಹೋಗಿ ದಾಳಿ ಮಾಡುವಂತೆ ನಮಗೆ ಲಿಖಿತವಾಗಿ ಸೂಚನೆ ನೀಡಿರುವುದಿಲ್ಲ. ನಾನು ಮತ್ತು ಪರಶುರಾಮ ಸೇರಿ ನಮ್ಮ ಮೋಟಾರ ಸೈಕಲ ಮೇಲೆ ಹೋಗಿದ್ದೇವು. ಪೊಲೀಸರು ಮತ್ತು ಪಂಚರು ಪೊಲೀಸ್ ಇಲಾಖಾ ಜೀಪಿನಲ್ಲಿ ಬಂದಿದ್ದರು. ನಿಪಿ.1 ದೂರಿನಲ್ಲಿ ನಾವು ಯಾವ ವಾಹನದಲ್ಲಿ ಹೋಗಿದ್ದೇವು ಎನ್ನುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೊಡಮನಳ್ಳಿ ಕ್ರಾಸ್ ದಿಂದ ಮೂಡಬುಳ ಕ್ರಾಸ್ 6 ರಿಂದ 7 ಕಿ.ಮಿ. ದೂರ ಇರುತ್ತದೆ. ರಸಗೊಬ್ಬರವನ್ನು ಮೂಡಬುಳದಿಂದ ಸಾಗಾಟ ಮಾಡಲಾಗುತ್ತಿದ್ದೆ ಎಂದು ಭಾತ್ಮಿ ಬಂದಿತ್ತು. ನಿಪಿ.1 ರಲ್ಲಿನ ವಾಹಿತಿ 4 ನೇ ಆರೋಪಿ ಅಂಬ್ರೇಶ್ ನೀಡಿರುವ ಮಾಹಿತಿಯನ್ನು ಅಧರಿಸಿ ಬರೆಯಲಾಗಿದೆ. ನಾನು ಹೇಳುವಂತೆ 4 ನೇ ಆರೋಪಿ ಅಂಬ್ರೇಶ್ ನಮಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಕೋಡಮನಳ್ಳಿ ಕ್ರಾಸ್ ಹತ್ತಿರ ಹಾಜರು ಇರಲಿಲ್ಲ ಎಂದರೆ ಸರಿ. ಸದರಿ 1 ಡರಿಂದ 3 ನೇ ಆರೋಪಿತರನ್ನು ದೂರು ದಾಖಲಿಸುವರೆ ನೋಡಿರುವುದಿಲ್ಲ. ಸಾಕ್ಷಿ ಸ್ವತಹ ಮುಯಿವರೆದು ದೂರು ದಾಖಲಿಸಿದ ಮಾರನೇ ದಿನ 3 ನೇ ಆರೋಪಿ ಸುಜಾತಳನ್ನು ಪೊಲಿಸ್ ಠಾಣೆಯಲ್ಲಿ ನೋಡಿರುವುದಾಗಿ ಹೇಳುತ್ತಾರೆ. ದೂರು ದಾಖಲಿದ ಮಾರನೇ ದಿನ ಪೊಲಿಸ್ ಠಾಣೆಗೆ ಯಾವ ಕಾರಣಕ್ಕಾಗಿ ಹೋಗಿದೀರಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ರಸಗೊಬ್ಬರ ಪರೀಕ್ಷೆ ಮಾಡಲು ಹೋಗಿದ್ದೆ ಎಂದು ಹೇಳುತ್ತಾರೆ. ನಾನು ದೂರು ದಾಖಲಿಸಿದ ಮಾರನೇ ದಿನ ಪೊಲಿಸ್ ಠಾಣೆಗೆ ಹೋಗಿದ್ದಾಗ ಅಲ್ಲಿ 3 ನೇ ಆರೋಪಿ ಸುಜಾತಾ ಹಾಜರು ಇದ್ದರು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಆರೋಪಿ ಸುಜಾತಾ ಇವರ ಮನೆಯಲ್ಲಿ ನಕಲಿ ಗೊಬ್ಬರ ತಯಾರಿಸಲಾಗಿತ್ತು ಎನ್ನುವ ವಿಚಾರ ನನಗೆ ಪ್ರೊಲಿಸರು ಹೇಳಿದ್ದರಿಂದ ಅದನ್ನು ಇಂದು ಹೇಳುತ್ತಿದ್ದೆನೆ. ಸದರಿ ಲಾರಿ ನಂಬರ MH-13-R-3613 ನೇದರ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ.1 ದೂರಿನಲ್ಲಿ 1 ರಿಂದ 3 ನೇ ಆರೋಪಿತರು ಮೂಡಬೂಳ ಗ್ರಾಮದಲ್ಲಿನ ಮಲ್ಲಿನಾಥ ದ್ಯಾವಗೊಂಡ ಸಾ. ಮೂಡಬುಳ ಇವರ ಗೊದಾಮಿನಿಂದ ಲೋಡ್ ಮಾಡಿಸಿ ಇಟಗಾ ಎಸ್ ಗ್ರಾಮಕ್ಕೆ ತೆಗೆದುಕೊಂಡು ಹೋಗಲು ಹೇಳಿದ್ದರು ಎಂದು 4 ನೇ ಆರೋಪಿ ತಿಳಿಸಿದ್ದ ಎಂದು ಬರೆಯಲಾಗಿದೆ ಎಂದರೆ ಸರಿ. ಮಲ್ಲಿನಾಥ ದ್ಯಾಮಗೊಂಡ ಸಾ. ಮೂಡಬುಳ ಇವರ ವಿರುದ್ಧ ದೂರನ್ನು ಯಾವ ಕಾರಣಕ್ಕಾಗಿ ದಾಖಲಿಸಿರುವುದಿಲ್ಲ ಎಂದು ಕೇಳಲಾದ

ಪ್ರಶ್ನೆಗೆ ಸಾಕ್ಷಿಯು  ಯಾವುದೇ ಉತ್ತರ ನೀಡಿರುವುದಿಲ್ಲ.  ಸದರಿ ರಸಗೊಬ್ಬರವನ್ನು ಇಟಗಾ ಎಸ್ ಗ್ರಾಮದ ಯಾವ ವ್ಯಕ್ತಿಗೆ ತಲುಪಿಸಲು 1 ರಿಂದ 3 ನೇ ಆರೋಪಿತರು ಹೇಳಿದ್ದರು ಎನ್ನುವ ಬಗ್ಗೆ ನಾವು 4 ನೇ ಆರೋಪಿತನ ಬಳಿ ವಿಚಾರಿಸಿರುವುದಿಲ್ಲ. ಈ ಪ್ರಕರಣದ ದಾಖಲಿಸುವ ಮುಂಚೆ ಮತ್ತು ನಂತರದಲ್ಲಿ ಶಹಾಪೂರ ನಗರದಲ್ಲಿ ನಕಲಿ DAP ಗೊಬ್ಬರ ಮಾರಾಟ ಮಾಡಲಾಗತ್ತಿದ್ ೆ ಎನ್ನುವ ಬಗ್ಗೆ ದೂರು ಬಂದಿರಲಿಲ್ಲ.  ಸಾಕ್ಷಿಯು ಪುನಹಹೇಳುತ್ತಾರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ DPA ಗೊಬ್ಬರ ಬಗ್ಗೆ ದೂರು ಬಂದಿರುತ್ತವೆ ಎಂದು ಹೇಳುತ್ತಾರೆ. ಈ ಪ್ರಕರಣದ ದಾಖಲಿಸುವ ಎಷ್ಟು ದಿನಗಳ ಮುಂಚೆ ನಕಲಿ DAP ಗೊಬ್ಬರ ಮಾರಾಟ ಮಾಡಿ ಮೋಸ ಮಾಡಿಡಿರುವ ಬಗ್ೆ್ಗ ದೂರು ಬಂದಿರುವ ಬಗ್ಗೆ ನಮ್ಮ ಕಚೇರಿಯಲ್ಲಿ  ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣದ ದಾಖಲಿಸಿದ ನಂತರವೂ ಸಹ ನಕಲಿ DAP ಗೊಬ್ಬರ ಮಾರಾಟ ಮಾಡಿ ಮೋಸ ಮಾಡಿರುವ ಬಗ್ೆ್ಗ ದೂರು ಬಂದಿರುವ ಬಗ್ಗೆ ನಮ್ಮ ಕಚೇರಿಗೆ  ಬಂದಿರಲಿಲ್ಲ.  ಸದರಿ DAP ಗೊಬ್ಬರ ತಯಾರಿಸುವ 3-4 ಕಂಪನಿಗಳು ಇರುತ್ತವೆ ಎಂದರೆ ಸರಿ. ಬೇರೆ ಬೇರೆ  ಕಂಪನಿ ತಯಾರಿಸುವ  DAP ಗೊಬ್ಬರಗಳಲ್ಲಿ Specifications ವ್ಯತ್ಯಾಸದಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು  ನನ್ನ ಮೇಲಾಧಿಕಾರಿ ಗೌತಮ್ ವಾಗ್ಮೋರೆ ಇವರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿ ಗೌತಮ್ ವಾಗ್ಮೋರೆ ಇವರಿಗೆ ಈ ಪ್ರಕರಣದ ಬಗ್ಗೆ ವರದಿಯನ್ನು  ಲಿಖಿತವಾಗಿ ನೀಡಿರುವುದಿಲ್ಲ.  ನಾನ ಹೇಳುವಂತೆ ಆರೋಪಿತರು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ.</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.